ಹುಡುಗಿ.' ಅಧ್ಯಕ್ಷರು ಪದೇ ಪದೇ ಈ ಮಾತನ್ನು ಹೇಳುತ್ತಿದ್ದರು. ಹೊರಡುವ ಮುನ್ನ ತನ್ನ ವಿಸಿಟಿಂಗ್ ಕಾರ್ಡ್ ಅವಳ ಕೈಯಲ್ಲಿಟ್ಟು ಭೇಟಿ ಮಾಡಬೇಕೆನಿಸಿದರೆ ಮಾಡಬಹುದು ಎಂದು ಹೇಳಲು ಮರೆಯಲಿಲ್ಲ. ಅಪರಿಚಿತರಿಂದ ಪಡೆಯುವಂತೆ ಆಕೆ ಅದನ್ನು ಪಡೆದು ನೋಡದೆಯೆ ಪರ್ಸಿನಲ್ಲಿ ತುರುಕಿಕೊಂಡಳು. ಒಂದೆರೆಡು ತಿಂಗಳು ಕಳೆದಿರಬಹುದು ಸುಜಾತ ತನ್ನ ಕೆಲಸ ಕಾರ್ಯದಲ್ಲಿ ಅವಳ ನೆನಪನ್ನು ಬದಿಗೆ ಸರಿಸುತ್ತಿದ್ದಳು.

ಮಧ್ಯಾಹ್ನ ಸುಮಾರು ಮೂರು ಗಂಟೆಯ ಸಮಯ. ಸುಜಾತ ಸ್ಟಾಫ್ ರೂಮಿನಲ್ಲಿ ಕುಳಿತು ಪ್ರಾಕ್ಟಿಕಲ್ ಪುಸ್ತಕಗಳನ್ನು ತಿದ್ದುತ್ತಿದ್ದಳು. 'ಮೇಡಂ ನಿಮ್ಮನ್ನು ನೋಡಲು ಯಾರೋ ಬಂದಿದ್ದಾರೆ. ಅವರನ್ನು ಕಳಿಸಲೇ?' ವಾಚ್ ಮ್ಯಾನ್ ಈರಯ್ಯ ಬಾಗಿಲಲ್ಲೇ ನಿಂತು ಕೇಳಿದಾಗ ನಿರ್ಲಿಪ್ತಳಾಗಿ ಕಳಿಸುವಂತೆ ಹೇಳಿದಳು.

ಬಂದವಳು ಅದೇ ಹುಡುಗಿ. ಸುಜಾತ ಈ ಸರ್ತಿ ಎಚ್ಚರಿಕೆಯಿಂದ 'ಓಹೋ ಮಾನಸ ಬನ್ನಿ ಕೂತ್ಕೊಳ್ಳಿ. ಇದು ನಮ್ಮದು ಮೂರನೆಯ ಭೇಟಿ.' ಎಂದು ಕುರ್ಚಿಯನ್ನು ತೋರಿದಳು. ಅಕ್ಕ ಪಕ್ಕದಲ್ಲಿದ್ದ ಅವಳ ಸಹೋದ್ಯೋಗಿಗಳು ಬಂದವಳನ್ನು ಕುತೂಹಲದಿಂದ ನೋಡಿದರು.

'ಹೇಳಿ ಮಾನಸ, ನನ್ನಿಂದ ಏನಾಗಬೇಕು?'

'ಸುಜೀ, ಸಾರಿ ಕಣೆ.' ಇವಳ ಏಕವಚನ ಪ್ರಯೋಗ ಸುಜಾತಳಲ್ಲಿ ಎಷ್ಟು ಆಶ್ಚರ್ಯವನ್ನುಂಟು ಮಾಡಿತೋ ಅಷ್ಟೇ ಆಶ್ಚರ್ಯವನ್ನು ಉಂಟುಮಾಡಿತ್ತು ಇವಳ ಸಹೋದ್ಯೋಗಿಗಳಿಗೆ.

'ಸುಜಾತ ಮೇಡಂ ನಿಮ್ಮ ಕಸಿನ್ ಸಿಸ್ಟರಾ?' ಅವರ ಕುತೂಹಲಕ್ಕೂ ಒಂದು ಉತ್ತರ ಬೇಕಿತ್ತು.

'ಹೌದು ಮೇಡಂ. 'ಸುಜಾತ ಕಿರುನಗೆಯೊಂದಿಗೆ ಅವಳ ಕೈಹಿಡಿದೆಬ್ಬಿಸಿ ನಡಿ ಕ್ಯಾಂಟೀನ್‌ಗೆ ಹೋಗೋಣ. ಅಲ್ಲೇ ಮಾತಾಡೋಣ. ನಂಗೆ ಈಗೇನು ಕ್ಲಾಸಿಲ್ಲ.' ಎಂದಳು.

ಕ್ಯಾಂಟೀನ್‌ನಲ್ಲಿ ಮೂಲೆ ಟೇಬಲ್ ಆರಿಸಿ ಸುಜಾತ ತಾನೇ ಮಾತು ಪ್ರಾರಂಭಿಸಿದಳು 'ಮೆಹರ್ ಎಷ್ಟು ದಿನಾ ಆಯ್ತು ನಿನ್ನ ನೋಡಿ. ಎಲ್ಲಿದ್ದೇ? ಏನು ಮಾಡ್ತಾ ಇದ್ದೇ? ಈಗ ಮಾನಸ...?'

'ನಾವೆಲ್ಲಾ ಪರಿಸ್ಥಿತಿಯ ಕೈಗೊಂಬೆಗಳು. ಎಲ್ಲರಿಗೂ ಜೀವನ ಸುಗಮವಾಗಿರುವುದಿಲ್ಲವಲ್ಲಾ. ನಾನು ಬದುಕಿ ಉಳಿದಿರುವುದೇ ಪವಾಡ.'

'ನೀನು ಈ ರೀತಿ ಒಗಟಿನಲ್ಲಿ ಮಾತನಾಡಿದರೆ ನಾನು ಹೇಗೆ ತಿಳಿದುಕೊಳ್ಳಲಿ? ನಾನು ಗುರುತಿಸಿರುವುದು ನನ್ನ ಗೆಳತಿಯನ್ನೇ. ಆದಂತೂ ನಿಜ. ನಿನ್ನನ್ನು ನೋಡಿದಾಗಲಿಂದಲೂ ನನ್ನ ಮನಸ್ಸಿನ ನೆಮ್ಮದಿ ಹಾಳಾಗಿದೆ. ಅಂತಾದ್ದು ಏನಾಯಿತು? ನಿನ್ನ ಗಂಡ, ಅಪ್ಪ ಅಮ್ಮ, ಅಕ್ಕಂದಿರು, ತಮ್ಮ ಎಲ್ಲಾ ಎಲ್ಲಿ ಹೋದರು?'

'ಸುಜೀ ಆ ಕಹಿಯನ್ನೆಲ್ಲ ನಾನು ನಿನಗೆ ಮತ್ತೊಮ್ಮೆ ಪುರಸೊತ್ತಾಗಿ ಹೇಳುತ್ತೇನೆ.' ಬಜ್ಜಿಯ ಒಂದು ತುಣುಕು ಕೈಯಲ್ಲಿ ಕಾಫಿ ಕಪ್ಪನ್ನು ಮತ್ತೊಂದು ಕೈಯ್ಯಲ್ಲಿ ಹಿಡಿದು ಸುಜಿಯ ಕಡೆ ನೋಡಿದಳು.

'ನಾನೇನು ನಿನ್ನನ್ನ ಬಲವಂತ ಮಾಡೋಲ್ಲ. ಆದರೆ ನಿನಗೆ ಹೇಗೆ ಸಹಾಯ ಮಾಡಬಲ್ಲೆ? ನೀನು ಬಿ.ಎಸ್ಸಿ ಪೂರ್ತಿ ಮಾಡಿದೆಯಾ?'

'ಇಲ್ಲ. ಕಣೆ. ತಕ್ಷಣ ಕುವೈಟ್‌ಗೆ ಹೋಗಬೇಕಾಗಿ ಬಂತು. ಅಲ್ಲಿ ..ಅಲ್ಲಿ... ಅದೆಲ್ಲಾ ಕೆಟ್ಟ ಕನಸು.'

ಸುಜಾತ ಅವಳ ಗಲ್ಲ ಹಿಡಿದು ಸಾಂತ್ವನ ಹೇಳಿದಳು. 'ಹೋಗಲಿ ಬಿಡೆ. ಸರಿ ನಿನ್ನ ದಾಖಲೆಗಳಲ್ಲಿ ಏನಿದೆ? ನಿನ್ನ ಪಾಸ್‌ಪೋರ್ಟ್‌ನಲ್ಲಿ ಯಾವ ಹೆಸರಿದೆ? ನೀನು ಹೀಗೆ ಹೆಸರು ಮಾತ್ರ ಬದಲಾಯಿಸಿಕೊಂಡು ಬದುಕುವುದು ಕಷ್ಟ ಕಣೆ. ದಾಖಲೆಗಳು ಬೇಕು. ಎಷ್ಟು ವರ್ಷ ಹೀಗೆ ವೃದ್ಧಾಶ್ರಮದಲ್ಲಿ ಕೆಲಸ ಮಾಡಿಕೊಂಡಿರುತ್ತೀಯ? ಒಂದು ಕೆಲಸ ಮಾಡೋಣ ಡೂಪ್ಲಿಕೇಟ್ ಮಾರ್ಕ್ಸ್ ಕಾರ್ಡುಗಳಿಗೆ ಅರ್ಜಿ ಸಲ್ಲಿಸಿ ಮೊದಲು ಅದೆಲ್ಲಾ ಪಡೆಯೋಣ. ಕೊನೆಯ ಸೆಮಿಸ್ಟರ್ ಪರೀಕ್ಷೆ ಮುಗಿಸು. ಒಂದು ಅರ್ಹತೆ ಬರುತ್ತದೆ'.

'ನಾನು ಮೆಹರುನ್ನೀಸ ಆಗಿ ಬದುಕಲಾರೆ. ಅದು ಕಪ್ಪು ಚುಕ್ಕೆ. ಸರಿಯಾಗಿ ಗುರುತು ಪರಿಚಯವಿಲ್ಲದೆ ನಿಕಾ ಮಾಡಿಕೊಳ್ಳುವವರಿಗೆ ನಾನೊಂದು ಉದಾಹರಣೆ.'

'ಅದೇ ತಪ್ಪು ಮೆಹರ್. ಮೆಹರುನ್ನೀಸ ಹೆಸರು ಕಪ್ಪು ಚುಕ್ಕೆ ಅಲ್ಲ. ಆ ಸಮಯದಲ್ಲಿ ನಡೆದದ್ದು ಸರಿಯಲ್ಲ. ನೀನ್ಯಾಕೆ ಅಷ್ಟು ನಿಸ್ಸಹಾಯಕಳಾಗಿದ್ದೇ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಈಗ ನೋಡು. ನಿನ್ನ ಎಲ್ಲ ದಾಖಲೆಗಳಲ್ಲಿ ನಿನ್ನ ಮೂಲ ಹೆಸರಿದೆ. ಅದನ್ನೆಲ್ಲಾ ಬದಲಾಯಿಸುವುದು ತುಂಬಾ ಕಷ್ಟ. ಅದೇ ಹೆಸರಿನಲ್ಲೇ ಸ್ವತಂತ್ರವಾಗಿ ಬದುಕಿ ತೋರಿಸು.'